ಪಾಠ 4 ಜುಲೈ 21-27

**ಮೊದಲ ಸಭೆಯ ನಾಯಕರು**



## ಸಬ್ಬತ್ತಿನ ಮಧ್ಯಾಹ್ನ:

**ಈ ವಾರದ ಪಾಠದ ಅಧ್ಯಯನಕ್ಕಾಗಿ:** ಅ.ಪೋ.ಕೃ 6, ರೋಮ 3:28, ಅ.ಪೋ.ಕೃ 7:48, ಇಬ್ರಿಯರಿಗೆ 5:11-14, ಮೀಕ 6:1-16, ಅ.ಪೋ.ಕೃ 7, ಅ.ಪೋ.ಕೃ 8:4-25.

**ಸ್ಮರಣ ವಾಕ್ಯ**: **"ಹೀಗೆ ದೇವರ ವಾಕ್ಯವು ಪ್ರಬಲವಾಯಿತು; ಯೆರೂಸಲೇಮಿನಲ್ಲಿ ಶಿಷ್ಯರ ಸಂಖ್ಯೆಯು ಬಹಳವಾಗಿ ಹೆಚ್ಚಿತು; ಇದಲ್ಲದೆ ಯಾಜಕರಲ್ಲಿ ದೊಡ್ಡ ಸಮೂಹವು ನಂಬಿಕೆಗೆ ವಿಧೇಯರಾದರು" (ಅ.ಪೋ.ಕೃ 6 :7).**

ಪೆಂತಿಕೊಸ್ತಿನ ದಿನದಂದು ಮಾನಸಾಂತರ ಹೊಂದಿದ ಅನೇಕರು ಗ್ರೀಕ್-ರೋಮ್ ಪ್ರಪಂಚದ ಹಿನ್ನಲೆಯಿಂದ ಬಂದಂತಹವರು ಮತ್ತು ಈಗ ಯೆರುಷಲೇಮಿನಲ್ಲಿ ವಾಸಿಸುತ್ತಿದ್ದ ಯೆಹೂದ್ಯರಾಗಿದ್ದರು (ಅ.ಪೋ.ಕೃ 2:5,9-11). ಅವರು ಯೆಹೂದ್ಯರಾಗಿದ್ದರೂ ಕೂಡ ಯೂದಾಯ ಪ್ರಾಂತ್ಯದ ಯೆಹೂದ್ಯರಿಗಿಂತ ಅವರು ಭಿನ್ನವಾಗಿದ್ದರು, ಅ.ಪೋ.ಕೃ 6:1 ರಲ್ಲಿ ಹೇಳಿರುವ "ಇಬ್ರಿಯರು" ಎಂಬ ಪದಕ್ಕೆ ಅರ್ಥವನ್ನು ಹುಡುಕಿದರೆ ಅವರಿಗೆ ಅನೇಕ ವ್ಯತ್ಯಾಸಗಳಿದ್ದೂ ಹಾಗೂ ಮುಖ್ಯವಾಗಿ ಅವರಿಗೆ ಆರಾಮಿಕ್ ಭಾಷೆ ಮತ್ತು ಯುದಾಯ ಪ್ರಾಂತ್ಯದ ಸುತ್ತಮುತ್ತಲಿನ ಭಾಷೆಗಳ ಪರಿಚಯವಿರಲಿಲ್ಲ.

ಇದಲ್ಲದೆ ಇನ್ನೂ ಅನೇಕ ಸಾಂಸ್ಕೃತಿಕ ಮತ್ತು ಧಾರ್ಮಿಕ ವ್ಯತ್ಯಾಸಗಳಿದ್ದವು. ಅವರು ಬೇರೆ ಅನ್ಯ ದೇಶದಲ್ಲಿ ಹುಟ್ಟಿದ್ದರಿಂದ ಅವರಿಗೆ ಯೂದಾಯ ಪ್ರಾಂತ್ಯದ ಬೇರುಗಳ ಜೊತೆಗೆ ಸಂಭಂದಗಳು ಕಡಿದುಹೊಗಿದ್ದವು, ಅಥವಾ ಅವರಲ್ಲಿ ಆ ಸಂಸ್ಕೃತಿಗಳು ಅಷ್ಟಾಗಿ ಗಟ್ಟಿಯಾಗಿರಲಿಲ್ಲ. ಅವರು ದೇವಾಲಯದ ಆಚಾರಗಳಲ್ಲಿ ಅಷ್ಟಾಗಿ ಆಸಕ್ತಿಯನ್ನು ತೋರಿಸುತ್ತಿರಲಿಲ್ಲ ಮತ್ತು ಇಸ್ರೇಲ್ ಪ್ರಾಂತ್ಯಕ್ಕೆ ಸೀಮಿತವಾಗಿದ್ದ ಮೋಶೆಯ ಧರ್ಮಶಾಸ್ತ್ರದ ಆಚರಣೆಗಳನ್ನು ಅವರು ಪಾಲಿಸುತ್ತಿರಲಿಲ್ಲ.

ಇದರ ಜೊತೆಗೆ ಅವರು ತಮ್ಮ ಜೀವನದ ಹೆಚ್ಚು ಭಾಗವನ್ನು ಗ್ರೀಕ್-ರೋಮ್ ಪ್ರಾಂತ್ಯದಲ್ಲಿ ಕಳೆದಿದ್ದರಿಂದ ಮತ್ತು ಅನ್ಯರ ಜೊತೆಗೆ ಹೆಚ್ಚು ಭಾಂದವ್ಯವನ್ನು ಬೆಳೆಸಿಕೊಂಡಿದ್ದರಿಂದ ಕ್ರೈಸ್ತ ಸಭೆಯಲ್ಲಿ ಎಲ್ಲರನ್ನೂ ಸೇರಿಸಿಕೊಳ್ಳಬೇಕು ಎನ್ನುವ ವಿಶಾಲವಾದ ಮನೋಭಾವವನ್ನು ಬೆಳೆಸಿಕೊಂಡಿದ್ದರು. ಇದರಿಂದ ಅನ್ಯರನ್ನು ತನ್ನ

ಸುವಾರ್ತೆಯಲ್ಲಿ ಭಾಗಿಯಾಗುವಂತೆ ಮಾಡಬೇಕು ಎನ್ನುವ ಉದ್ದೇಶವನ್ನು ದೇವರು ಈ ಗ್ರೀಕ್-ರೋಮ್ ಹಿನ್ನಲೆಯುಳ್ಳ ಯೆಹೂದ್ಯರ ಮೂಲಕ ನೆರವೇರಿಸುತ್ತಿದ್ದರು.

ಭಾನುವಾರ ಜುಲೈ 22

## ಏಳು ಜನರ ನೇಮಕ

**ಅ.ಪೋ.ಕೃ 6:1ನ್ನು ಓದಿರಿ. ಗ್ರೀಕ್-ರೋಮನ್ನರ ಹಿನ್ನಲೆಯ ವಿಶ್ವಾಸಿಗಳ ದೂರು ಏನು?**

______________________________________________________________________

______________________________________________________________________

"ಈ ದೂರಿನ ಮುಖ್ಯಭಾಗವು ದೇವಾಲಯದ ಸೇವೆಯಲ್ಲಿ ಗ್ರೀಕ್ ವಿಧವೆಯರನ್ನು ನಿರ್ಲಕ್ಷಿಸುತ್ತಿದ್ದಾರೆ ಎಂಬುದಾಗಿತ್ತು. ಯಾವುದೇ ರೀತಿಯ ತಾರತಮ್ಯವು ಸುವಾರ್ತೆಯ ಮೂಲ ಉದ್ದೇಶಕ್ಕೆ ದಕ್ಕೆ ತರುವುಂತದಾಗಿತ್ತು. ಆದರೂ ಕೂಡ ಸೈತಾನನು ಈ ರೀತಿಯ ಸಂಶಯವನ್ನು ಅವರಲ್ಲಿ ತಂದಿದ್ದನು. ಇಂತಹ ಸಮಯದಲ್ಲಿ ಸಂಶಯಗಳನ್ನು ತೆಗೆದುಹಾಕುವುದಕ್ಕಾಗಿ ಸರಿಯಾದ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗಿತ್ತು ಇಲ್ಲದೆ ಹೋದರೆ ವಿರೋಧಿಯು ವಿಶ್ವಾಸಿಗಳಲ್ಲಿ ವ್ಯತ್ಯಾಸವನ್ನು ತಂದು ಸಭೆಯನ್ನು ಇಬ್ಬಾಗ ಮಾಡುವ ಅಪಾಯವಿತ್ತು." **ಎಲೆನ್ ಜಿ ವೈಟ್, *ದಿ ಅಕ್ಟ್ಸ್ ಅಪೋಸ್ಟ್ಲ ಸ್*, ಪುಟ 88.**

ಅಪೋಸ್ತಲರು ಸೂಚಿಸಿದ ಪರಿಹಾರವೆಂದರೆ ಯೆಹೂದ್ಯರು ಅವರಲ್ಲಿರುವ ಜನರಲ್ಲಿ ಏಳು ಜನರನ್ನು ಮೇಜಿನ ಬಳಿಯಲ್ಲಿ ಸೇವೆ ಸಲ್ಲಿಸಲು ಆಯ್ಕೆಮಾಡಿಕೊಳ್ಳಬೇಕಾಗಿತ್ತು. (*ಅ.ಪೋ.ಕೃ 6:2).* ಅವರು ತಮ್ಮ ಹೆಚ್ಚಿನ ಸಮಯವನ್ನು ಪ್ರಾರ್ಥನೆ ಮತ್ತು ದೇವರ ವಾಕ್ಯವನ್ನು ಸಾರುವ ಸೇವೆಯಲ್ಲಿ ಕಳೆಯಬೇಕಾಗಿತ್ತು *(ಅ.ಪೋ.ಕೃ 6:4).* ಇದನ್ನು ವಿಶೇಷವಾದ "ಪ್ರತಿದಿನ" ಎಂಬ ಪದದ ಜೊತೆಗೆ ಜೋಡಿಸಲಾಗಿದೆ. ಇದು ಆದಿ ಸಭೆಯಲ್ಲಿದ್ದ ಎರಡು ಮುಖ್ಯವಾದ ಕಾರ್ಯಗಳು ಬೋಧಿಸುವುದು (ದೇವರ ವಾಕ್ಯ) ಮತ್ತು ಸಹವಾಸ (ಮೇಜಿನ ಬಳಿಯಲ್ಲಿ), ಇದರಲ್ಲಿ ಎರಡನೇಯ ಭಾಗವು ಸಹವಾಸ ಭೋಜನ, ಕರ್ತನ ರಾತ್ರಿ ಭೋಜನ, ಮತ್ತು ಪ್ರಾರ್ಥನೆಗಳು *(ಅ.ಪೋ.ಕೃ 2:42,46,5:42).*

ಇದರಿಂದ ಅಪೋಸ್ತಲರು ಹೆಚ್ಚಿನ ಸಮಯವನ್ನು ವಿಶ್ವಾಸಿಗಳ ನಡುವೆ ಯೇಸುವಿನ ಬೋಧನೆಗಳನ್ನು, ಸಿದ್ಧಾಂತಗಳನ್ನು ತಿಳಿಸುವುದರಲ್ಲಿ ಮತ್ತು ಪ್ರಾರ್ಥನೆಮಾಡುವುದರಲ್ಲಿ ಕಳೆಯುತ್ತಾರೆ. ಈ ನಿಯಮಿತವಾಗಿರುವ ಏಳು ಜನರು ಸಹವಾಸದ ಕಾರ್ಯಗಳಲ್ಲಿ ಮತ್ತು ಮನೆಯಲ್ಲಿ ನಡೆಯುವ ಪ್ರಾರ್ಥನೆಗಳಲ್ಲಿ ಸಹಾಯ ಮಾಡುತ್ತಾರೆ. ಅವರ ಜವಾಬ್ದಾರಿಯು ಸಭಾ ಸೇವಕರ ಕ್ರಿಯೆಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಒಂದು ವಿಧದಲ್ಲಿ ಅವರು ಸಭೆಯ ಗುಂಪಿನ ಮೊದಲ ನಾಯಕರಾಗಿದ್ದರು.

**ಅ.ಪೋ.ಕೃ 6:2-6. ಏಳು ಜನರನ್ನು ಹೇಗೆ ಆಯ್ಕೆ ಮಾಡಲಾಯಿತು ಮತ್ತು ಅವರು ಸೇವೆಗೆ ಹೇಗೆ ನಿಯಮಿತಗೊಂಡರು?**

___

ಈ ಅಭ್ಯರ್ಥಿಗಳು ನೈತಿಕ, ಆತ್ಮೀಕ ಮತ್ತು ಪ್ರಾಯೋಗಿಕ ಸ್ವಭಾವಗಳಲ್ಲಿ ವಿಶೇಷವಾಗಿರಬೇಕಾಗಿತ್ತು. ಅವರು ಸಮಾಜದಲ್ಲಿ ಮತ್ತು ಸಭೆಯಲ್ಲಿ ಒಳ್ಳೆಯ ಹೆಸರನ್ನು ಹೊಂದಿರಬೇಕಾಗಿತ್ತು ಮತ್ತು ಅವರು ಆತ್ಮದಿಂದ ಮತ್ತು ಜ್ಞಾನದಿಂದ ತುಂಬಿದವರಾಗಿರಬೇಕು. ಸಭೆಯ ಅನುಮತಿಯಿಂದ ಏಳು ಜನರನ್ನು ಆಯ್ಕೆ ಮಾಡಿ ಪ್ರಾರ್ಥನೆಯ ಮೂಲಕ ಅವರ ಮೇಲೆ ಕೈಗಳನ್ನು ಇರಿಸಿ ಅವರನ್ನು ಆಯ್ಕೆಮಾಡಲಾಯಿತು. ಈ ಅಚಾರವು ಸಭೆಯ ಸೇವಕರ ಸೇವೆಗೆ ಅವರನ್ನು ಒಪ್ಪಿಸುವ ಬಹಿರಂಗ ಒಪ್ಪಿಗೆ ಮತ್ತು ಅವರಿಗೆ ನೀಡಿದ ಅಧಿಕಾರದ ಗುರುತಾಗಿತ್ತು.

**ಅಧಿಕಾರದಲ್ಲಿರುವಾಗ ವ್ಯತ್ಯಾಸವನ್ನು ತೋರಿಸುವುದು ಅಷ್ಟು ಸುಲಭವೇ ಅದು ಬಹಳ ಸುಲಭವಲ್ಲವೆ? ದೇವರು ನಮಗೆ ನೀಡಿರುವ ಅಧಿಕಾರದಲ್ಲಿ ಶಾಂತಿಯನ್ನು ಮತ್ತು ನಿರ್ಧಿಷ್ಟ ಗುರಿಯನ್ನು ಹೊಂದಿ ಸೇವೆಗೆ ಸಮರ್ಪಿತವಾಗಿರುವುದು ಹೇಗೆ**

**ಸೋಮವಾರ** **ಜುಲೈ 23**

## ಸ್ತೆಫೆನನ ಸೇವೆ

ಆವರ ನೇಮಕವಾದ ನಂತರ ಆ ಏಳು ಜನರು ಕೇವಲ ಸಭೆಯ ಕಾರ್ಯಗಳಲ್ಲಿ ಮಾತ್ರ ತೊಡಗಿಕೊಳ್ಳದೆ ಸುವಾರ್ತೆಯ ಮತ್ತು ಸಾಕ್ಷಿಯ ಹೇಳುವುದರಲ್ಲಿ ನಿಮಗ್ನರಾದರು. ಇದರ ಪರಿಣಾಮವಾಗಿ ಸುವಾರ್ತೆಯು ಪರಿಣಾಮಕಾರಿಯಾಗಿ ಹರಡಿತು ಮತ್ತು ವಿಶ್ವಾಸಿಗಳು ಬೆಳೆಯುತ್ತಾ ಹೋದರು *(ಅ.ಪೋ.ಕೃ. 6:7)*. ಅಭಿವೃದ್ಧಿಯು ಆರಂಭವಾಯಿತು, ಆದಿ ಸಭೆಯಲ್ಲಿ ವಿರೋಧತೆಯು ಕೂಡ ಬೆಳೆಯುತ್ತಿತ್ತು. ಮುಂದಿನ ವಾಖ್ಯಾನ ಸ್ತೆಫೆನನೆಂಬ ಆತ್ಮೀಯತೆಯಿಂದ ತುಂಬಿರುವವನ ಸೇವೆಯ ಕುರಿತಾಗಿ ವಿವರಿಸುತ್ತದೆ.

**ಅ.ಪೋ.ಕೃ 6:8-16ನ್ನು ಓದಿರಿ. ಈ ವಚನಗಳು ಸ್ತೆಫೆನನ ಕುರಿತಾಗಿ ಮತ್ತು ಅವನ ನಂಬಿಕೆಯ ಹಾಗೂ ಸ್ವಭಾವದ ಕುರಿತಾಗಿ ಏನು ಹೇಳುತ್ತವೆ?ಮತ್ತು, ಸ್ತೆಫೆನನ ಯಾವ ಮಾತುಗಳು ಅವನ ವಿರೋಧಿಗಳನ್ನು ರೋಚ್ಚಿಗೆಳುವಂತೆ ಮಾಡಿದವು?**

___

___

ಗ್ರೀಕ್- ರೋಮನ್ನರ ಹಿನ್ನಲೆಯಿಂದ ಬಂದಂತಹ ಯೆಹೂದ್ಯನಾಗಿ ಸ್ತೆಫೆನನು ಸುವಾರ್ತೆಯನ್ನು ಯೆರುಷಲೇಮಿನ ಗ್ರೀಕ್-ರೋಮನ್ನರ ಹಿನ್ನಲೆಯ ಜನರು ಆರಾಧಿಸುವ ಸಭಾಮಂದಿರಗಳಲ್ಲಿ ಸುವಾರ್ತೆಯನ್ನು ಸಾರಿದನು. ಆ ನಗರದಲ್ಲಿ ಅಂತಹ ಅನೇಕ ಸಭಾಮಂದಿರಗಳಿದ್ದವು. ಅ.ಪೋ.ಕೃ 6:9 ರಲ್ಲಿ ಉಲ್ಲೇಖವಾಗಿರುವ

ಎರಡು ಸಭೆಗಳು ಅಂತಹ ಸಭೆಗಳಾಗಿರಬಹುದು. ಅದರಲ್ಲಿ ಒಂದು ದಕ್ಷಿಣ ಭಾಗದವರು ಇರುವ ಸಭೆ (ಸಿರೆನ್ ಮತ್ತು ಅಲೆಕ್ಸಾಂಡ್ರಿಯ ಪ್ರಾಂತ್ಯದವರು) ಉತ್ತರ ಭಾಗದವರು ಇರುವ ಸಭೆ (*ಸಿಸಿಲಿಯಾ ಮತ್ತು ಏಷ್ಯಾ ಪ್ರಾಂತ್ಯದವರು).*

ಆ ಚರ್ಚೆಯ ಕೇಂದ್ರ ಬಿಂದು ಯೇಸುವಾಗಿದ್ದನು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ, ಆದರೆ ಸ್ತೆಫೆನನು ಸುವಾರ್ತೆಯನ್ನು ಯಾವ ರೀತಿಯಲ್ಲಿ ಅರ್ಥಮಾಡಿಕೊಂಡಿದ್ದಾನೆ ಮತ್ತು ಅದನ್ನು ಹೇಗೆ ಅಭ್ಯಾಸ ಮಾಡಿಕೊಂಡಿದ್ದಾನೆ ಎಂಬುದರ ವಿಚಾರವಾಗಿ ಯೂದಾಯ ಪ್ರಾಂತ್ಯದ ಯೆಹೂದ್ಯರಲ್ಲಿ ತರ್ಕವು ಆರಂಭವಾಯಿತು.ಸ್ತೆಫೆನನು ಮೋಶೆ ಮತ್ತು ದೇವರ ವಿರುದ್ದವಾಗಿ ಮಾತನಾಡುತ್ತಿದ್ದಾನೆ ಎಂಬುದಾಗಿ ಅವರು ಆರೋಪ ಮಾಡಿದರು. ಅವರ ದೃಷ್ಟಿಯಲ್ಲಿ ಅದು ದೇವಾಲಯಕ್ಕೆ ಮತ್ತು ಆಜ್ಞೆಗೆ ವಿರುದ್ದವಾಗಿ ಮಾತನಾಡುತ್ತಿರುವಂತೆ ಕಾಣಿಸಿತು. ಅವನನ್ನು ಕೆಲವು ಅಂಶಗಳಲ್ಲಿ ತಪ್ಪಾಗಿ ಅರ್ಥೈಸಿಕೊಂಡಿದ್ದರೂ ಕೂಡ, ಅಥವಾ ಅವನ ಮಾತುಗಳನ್ನು ಬೇಕೆಂತಲೇ ತಿರುಚಿದ್ದರೂ ಕೂಡ ಹಾಗೂ ಅವನ ವಿರುದ್ದವಾಗಿ ಸುಳ್ಳು ಸಾಕ್ಷಿಗಳನ್ನು ಸೇರಿಸಿದ್ದರೂ ಅವನ ವಿರುದ್ದವಾಗಿದ್ದ ಆರೋಪಗಳನ್ನು ತಳ್ಳಿಹಾಕುವಂತಿರಲಿಲ್ಲ, ಇದನ್ನೇ ಯೇಸುವಿನ ವಿಷಯದಲ್ಲಿಯೂ ನಾವು ನೋಡುತ್ತೇವೆ *(ಮಾರ್ಕ 14:58; ಯೋಹಾನ 2:19).* ಹಿರಿಸಭೆಯವರು ದೇವಾಲಯದಲ್ಲಿ ಮಾಡುತ್ತಿದ್ದ ವಿಗ್ರಹಾರಾಧನೆಯನ್ನು ಸ್ತೆಫೆನನು ಖಂಡಿಸಲು ಉಪಯೋಗಿಸಿದ ಕಠಿಣವಾದ ಮಾತುಗಳು *(ಅ.ಪೋ.ಕೃ 7:48)* ಯೇಸುವಿನ ಮರಣದ ಕುರಿತಾದ ಆಳವಾದ ಅರ್ಥವನ್ನು ತಿಳಿಸುತ್ತದೆ. ಯಾಕೆಂದರೆ ದೇವಾಲಯದ ಮತ್ತು ಅದರಲ್ಲಿ ನಡೆಯುವ ಆಚರಣೆಗಳ ವಿರುದ್ದವಾಗಿ ಮಾತನಾಡುವುದು ಬಹಳ ದೊಡ್ಡ ಅಪರಾಧವಾಗುತ್ತದೆ. ಮತ್ತೊಂದು ಮಾತಿನಲ್ಲಿ ಹೇಳುವುದಾದರೆ, ಅನೇಕ ಯೆಹೂದ್ಯ ಹಿನ್ನಲೆಯಿಂದ ಬಂದಂತಹ ವಿಶ್ವಾಸಿಗಳು ದೇವಾಲಯದ ಮತ್ತು ಅದರಲ್ಲಿ ನಡೆಯುವ ಆಚರಣೆಗಳಲ್ಲಿ ಇನ್ನೂ ನಂಬಿಕೆಯನ್ನು ಇಟ್ಟುಕೊಂಡಿದ್ದರು *(ಅ.ಪೋ.ಕೃ 3:1;15:1,5; 21:17-24)* ಮತ್ತು ಅವುಗಳನ್ನು ಬಿಟ್ಟುಬಿಡಲು ಕಷ್ಟಪಡುತ್ತಿದ್ದರು. *(ಗಲಾತಿ 5:2-4, ಇಬ್ರಿಯರಿಗೆ 5:11-14*) ಸ್ತೆಫೆನನು ಮತ್ತು ಅವನ ಹಿಂಬಾಲಕರು ಯೇಸುವಿನ ಮರಣದಲ್ಲಿ ಈ ಎಲ್ಲಾ ಆಚಾರಗಳು ಸಂಪೂರ್ನವಾಗಿವೆ ಎಂಬುದನ್ನು ಬಹಳ ಬೇಗ ಅರ್ಥ ಮಾಡಿಕೊಂಡಿದ್ದರು.

**ನಮಗೆ ಬಹಳ ಇಷ್ಟವಾದ ಕೆಲವು ಅಭ್ಯಾಸಗಳನ್ನು ಹೆಚ್ಚಾಗಿ ನಾವು ಯಾಕೆ ಇಷ್ಟಪಡಬಾರದು ಅವುಗಳನ್ನು ತಪ್ಪು ಎಂದು ತೋರಿಸುವ ಹೊಸ ಬೆಳಕು ಬಂದಾಗ ಅದನ್ನು ಹೇಗೆ ಸ್ವೀಕಾರ ಮಾಡಬೇಕು?**

ಮಂಗಳವಾರ ಜುಲೈ 24

## ಹಿರಿ ಸಭೆಯ ಮುಂದೆ

**ಅ.ಪೋ.ಕೃ 7:1-53 ನ್ನು ಓದಿರಿ. ತನ್ನ ಮೇಲೆ ಆರೋಪ ಹೊರಿಸುವವರನ್ನು ಉದ್ದೇಶಿಸಿ ಸ್ತೆಫೆನನು ಏನು ಹೇಳುತ್ತಿದ್ದಾನೆ?**

____________________________________________________________

____________________________________________________________

ಸ್ತೆಫೆನನ ವಿರುದ್ಧ ಹೊರಿಸಲಾದ ಆರೋಪಗಳಿಗೆ ಅವನನ್ನು ಬಂಧಿಸಿ ಹಿರಿಸಭೆಯ ಮುಂದೆ ಹಾಜರುಪಡಿಸಲಾಯಿತು. ಯೆಹೂದ್ಯರ ಆಚಾರದ ಪ್ರಕಾರ ಆಜ್ಞೆ ಮತ್ತು ದೇವಾಲಯದ ಆಚರಣೆಗಳು ಬಹಳ ಮುಖ್ಯವಾದ ಮೂರು ಅಧಾರ ಸ್ತಂಭಗಳಲ್ಲಿ ಇದರಲ್ಲಿ ಕೊನೆಯದು ನೀತಿ ಕಾರ್ಯಗಳು, ಒಂದು ಇವುಗಳ ಮೇಲೆ ಲೋಕವು ನಿಂತಿದೆ ಎಂದು ಅವರು ನಂಬಿದ್ದರು. ಮೋಶೆಯ ಧರ್ಮಶಾಸ್ತ್ರವನ್ನು ಕಡೆಗಣಿಸುವುದು ಬಹಳ ತೀವ್ರವಾದ ತಪ್ಪಾಗಿ ಅವರು ಭಾವಿಸಿದ್ದರು ಆದ್ದರಿಂದ ಅವನ ಮೇಲೆ ದೇವದೂಷಣೆಯ ಆರೋಪವನ್ನು ಹೊರಿಸಲಾಯಿತು (*ಅ.ಪೋ.ಕೃ 6:11).*

ಸ್ತೆಫೆನನು ನೀಡಿದ ಉತ್ತರವು ಅಪೋಸ್ತಲರ ಕೃತ್ಯಗಳಲ್ಲಿಯೇ ಅತೀ ಉದ್ದನೇಯ ಭಾಷಣವಾಗಿದೆ. ಇದು ಆ ಸನ್ನಿವೇಶದ ಗಂಭೀರತೆಯನ್ನು ತೋರಿಸುತ್ತದೆ. ಆರಂಭದಲ್ಲಿ ಇದೊಂದು ಇಸ್ರಾಯೇಲ್ಯರ ಚರಿತ್ರೆಯ ಹಾಗೆ ಕಾಣಿಸಿದರೂ ಕೂಡ ಈ ಭಾಷಣವನ್ನು ಹಳೆಯ ಒಡಂಬಡಿಕೆಯ ಹಿನ್ನಲೆಯಲ್ಲಿ ನಾವು ನೋಡಬೇಕಾಗುತ್ತದೆ ಮತ್ತು ಹೇಗೆ ಪ್ರವಾದಿಗಳು ಇದನ್ನು ಉಪಯೋಗಿಸಿ ಇಸ್ರಾಯೇಲ್ಯರನ್ನು ದೇವರ ಕಡೆಗೆ ತಿರುಗುವಂತೆ ಎಚ್ಚರಿಸುತ್ತಿದ್ದರು ಎಂದು ನೋಡಬೇಕು. ಈ ರೀತಿಯ ಎಚ್ಚರಿಕೆಯ ಮಾತುಗಳನ್ನು ಹೇಳುವಾಗ ಅವರು ಕೆಲವೊಂದು ಬಾರಿ "*ರಿಬ್*" ಎಂಬ ಇಬ್ರಿಯ ಪದವನ್ನು ಉಪಯೋಗಿಸುತ್ತಿದರು. ಇದರ ಸರಿಯಾದ ಭಾಷಾಂತರವನ್ನು ಗಮನಿಸಿದರೆ ಹಳೆಯ ಒಡಂಬಡಿಕೆಯನ್ನು ಮುರಿಯುವವರ ವಿರುದ್ಧವಾಗಿ ದೇವರು ತೆಗೆದುಕೊಳ್ಳುವ ಕ್ರಮಗಳ ಕುರಿತಾಗಿ ಇದು ವಿವರಣೆಯನ್ನು ನೀಡುತ್ತದೆ.

ಮೀಕ 6:1,2 ರಲ್ಲಿ ಉದಾಹರಣೆಗೆ "ರಿಬ್" ಎಂಬ ಪದವು 3 ಬಾರಿ ಕಾಣಿಸುತ್ತದೆ. ಇದರ ನಂತರ ಸಿನಾಯಿ ಬೆಟ್ಟದಲ್ಲಿ ದೇವರು ಮಾಡಿದ ಒಡಂಬಡಿಕೆಯ *(ವಿಮೋಚನೆಕಾಂಡ 20-23)* ಮಾದರಿಯನ್ನು ತೋರಿಸುತ್ತದೆ. ಮಿಕನು ದೇವರ ಜನರ ಪರವಾಗಿ ಮಾಡಿರುವ ಅದ್ಭುತವಾದ ಕಾರ್ಯಗಳನ್ನು ಅವರಿಗೆ ಜ್ಞಾಪಕಮಾಡುತ್ತಾನೆ (ಮೀಕ 6:3-5) ಆ ಒಡಂಬಡಿಕೆಯನ್ನು ಮೀರುವುದರ ಪ್ರತಿಫಲವನ್ನು ಅವರಿಗೆ ತಿಳಿಸುತ್ತಾನೆ. *(ಮೀಕ 6:6-12).* ಹಾಗೂ ಕೊನೆಯದಾಗಿ ಅವಿಧೆಯತೆಗೆ ಸಿಗುವ ಪ್ರತಿಫಲವನ್ನು ತಿಳಿಸುತ್ತಾನೆ *(ಮೀಕ 6:13-16).*

ಸ್ತೆಫೆನನ ಭಾಷಣದ ಹಿನ್ನಲೆ ಇದಾಗಿರಬಹುದು. ಅವನ ಕಾರ್ಯಗಳನ್ನು ಕುರಿತಾಗಿ ವಿವರಣೆಯನ್ನು ನೀಡುವಂತೆ ಅವರು ಕೇಳಿದಾಗ ತನ್ನ ವಿರುದ್ಧವಾದ ಆರೋಪಗಳನ್ನು ಅಲ್ಲಗಳೆಯುವುದಿಲ್ಲ ಮತ್ತು ತನ್ನ ನಂಬಿಕೆಯನ್ನು ಸಮರ್ಥಿಸಿಕೊಳ್ಳುವುದಿಲ್ಲ ಬದಲಿಗೆ ಹಳೆಯ ಕಾಲದಲ್ಲಿ ಪ್ರವಾದಿಗಳು "*ರಿಬ್*" ಎಂಬ ಪದವನ್ನು

ಉಪಯೋಗಿಸಿ ಹೇಗೆ ಇಸ್ರಯೇಲ್ಯರನ್ನು  ಗಟ್ಟಿಯಾಗಿ ಖಂಡಿಸುತ್ತಿದ್ದರೋ ಅದೇ ರೀತಿಯ ಗಟ್ಟಿಯಾದ ಸ್ವರದಲ್ಲಿ ಅವರನ್ನು ಕುರಿತು ಮಾತನಾಡಿದನು. ಇಸ್ರಾಯೇಲ್ಯರ ಕುರಿತಾದ ಅವನ ಉದ್ದನೇಯ ಭಾಷಣ ಹೇಗೆ ಇಸ್ರಾಯೇಲ್ಯರು ತಮ್ಮ ಅವಿಧೇಯತೆಯಿಂದ ದೇವರಿಗೆ ದೂರವಾದರು ಎಂಬುದನ್ನು ತೋರಿಸುವುದಾಗಿತ್ತು.

ಅ.ಪೋ.ಕೃ 7:51-53 ಸ್ತೆಫೆನನು ಹೆದರುವುದಿಲ್ಲ ಬದಲಿಗೆ ಈ ನಾಯಕರು ದೇವರು ಇಸ್ರಾಯೇಲ್ಯರ ಮೇಲೆ ಸುರಿಸಿದ ಶಾಪಗಳಿಗೆ ಹೇಗೆ ಗುರಿಯಾಗಿದ್ದಾರೆ ಎಂದು ಹೇಳಿದನು. ಅವರ ಪಿತೃಗಳು ದೇವರ ಪ್ರವಾದಿಗಳನ್ನು ಸಾಯಿಸುವುದರ ಅಪರಾಧವನ್ನು ಹೊತ್ತುಕೊಂಡಿದ್ದರೆ ಅವರ ಮೇಲೆ ಅದಕ್ಕಿಂತ ಹೆಚ್ಚಿನ ಶಾಪವಿದೆ. “ನಮ್ಮ ಪಿತೃಗಳು” *(ಅ.ಪೋ. ಕೃ 7:11,19,38,44,45)*ಎಂದು ಆರಂಭದಲ್ಲಿ ಹೇಳಿದ ಮಾತನ್ನು ಅಂತ್ಯದಲ್ಲಿ “ನಿಮ್ಮ ಪಿತೃಗಳು” *(ಅ.ಪೋ.ಕೃ 7:51)*  ಎಂದು ಬದಲಾಯಿಸುವುದರ ಪ್ರಾಮುಖ್ಯತೆಯನ್ನು ಪರಿಗಣಿಸಬೇಕು. ಸ್ತೆಫೆನನು ಜನರನ್ನು ಮೆಚ್ಚಿಸುವ ಕಾರ್ಯದಿಂದ ದೂರವಾಗಿ ಯೇಸುವಿಗಾಗಿ ದೃಢವಾದ ನಿರ್ಧಾರವನ್ನು ತೆಗೆದುಕೊಂಡನು. ಅದರ ಫಲಿತಾಂಶ ಬಹಳ ಘೋರವಾಗಿದ್ದರೂ ಕೂಡ ಅವನ ಮಾತಿನಲ್ಲಿ ಭಯವಾಗಲಿ ಅಥವಾ ಪಶ್ಚಾತ್ತಾಪವಾಗಲಿ ಇರಲಿಲ್ಲ.

**ಈ ಹಿಂದೆ ನೀವು ಯೇಸುವಿಗಾಗಿ  ದೃಢವಾದ ಮತ್ತು ಅಚಲವಾದ ತೀರ್ಮಾನವನ್ನು ತೆಗೆದುಕೊಂಡಿದ್ದು ಯಾವಾಗ ? ನೀವು ತೆಗೆದುಕೊಂಡಿದ್ದಿರೋ ಅಥವಾ ಇಲ್ಲವೋ ಅದಕ್ಕೆ ಬದಲಾಗಿ ನೀವು ತಪ್ಪಿಸಿಕೊಂಡಿದ್ದಿರೋ? ನಿಮ್ಮ ಉತ್ತರ ತಪ್ಪಿಸಿಕೊಂಡಿದ್ದೇವೆ ಎಂಬುದಾದರೆ ಅದನ್ನು ಹೇಗೆ ಬದಲಾಯಿಸುವಿರಿ?**

ಬುಧವಾರ  **ಜುಲೈ 25**

## ಪರಲೋಕದ ಗುಡಾರದಲ್ಲಿ ಯೇಸು

ಪ್ರವಾದಿಯ ಮಾತಿನ ಅರ್ಥದ ಪ್ರಕಾರ (ಇಬ್ರಿಯ ಭಾಷೆಯಲ್ಲಿ “ನಬಿ” ಎಂದು) ದೇವರ ಪರವಾಗಿ ಮಾತನಾಡುವವನು ಎಂಬುದಾಗಿ, ಇಲ್ಲಿ ಸ್ತೆಫೆನನು “ರಿಬ್” ಎಂಬ ಪದವನ್ನು ಉಪಯೋಗಿಸಿದ ತಕ್ಷಣ ದೇವರ ಪ್ರವಾದಿಯಾಗುತ್ತಾನೆ. ಆದರೆ ಅವನ ಪ್ರವಾದನೆಯ ಸೇವೆ ಬಹಳ ಕಡಿಮೆ ಅವಧಿಯಾಗಿತ್ತು.

**ಅ.ಪೋ.ಕೃ 7:55,56 ನ್ನು ಓದಿರಿ. ಸ್ತೆಫೆನನ ದರ್ಶನದ ಅರ್ಥವೇನು?**

____________________________________________________________

____________________________________________________________

ಸ್ತೆಫೆನನು ಈ ಹಂತವನ್ನು ತಲುಪಿದಾಗ, ಜನರಲ್ಲಿ ಕೋಲಾಹಲ ಉಂಟಾಯಿತು. ಅವನು ಕ್ರಿಸ್ತನನ್ನು ಪ್ರವಾದನೆಗಳ ಜೊತೆಗೆ ಮತ್ತು ದೇವಾಲಯದ ಜೊತೆಗೆ ಹೋಲಿಸಿ ಮಾತನಾಡಲು ಆರಂಭಿಸಿದಾಗ ಯಾಜಕನು

ಭಯಭೀತನಾದಂತೆ ಕಂಡು ಬಟ್ಟೆಯನ್ನು ಹರಿದುಕೊಂಡನು. ಈ ಕ್ರಿಯೆಯ ಮೂಲಕ ತನ್ನ ಸ್ವರವನ್ನು ಬಹು ಬೇಗನೆ ಅಡಗಿಸಲಾಗುತ್ತದೆ ಎಂದು ಸ್ತೆಫನನು ಅರಿತುಕೊಂಡನು. ಅವನಿಗೆ ಅವರು ತೋರಿದ ವಿರೋಧತೆಯನ್ನು ಕಂಡು ತಾನು ಕೊನೆಯ ಸಾಕ್ಷಿಯನ್ನು ನೀಡುತ್ತಿದ್ದೇನೆ ಎಂದು ತಿಳಿದುಕೊಂಡನು. ತನ್ನ ಪ್ರಸಂಗದ ಮದ್ಯದಲ್ಲಿ ಅದನ್ನು ಅರ್ಧಕ್ಕೆ ನಿಲ್ಲಿಸಿದನು" **ಎಲೆನ್ ಜಿ ವೈಟ್ ದಿ ಅಕ್ಟ್ಸ್ ಆಫ್ ಅಪೋಸ್ಟ್ಸ ಸ್ ಪುಟ 100**

ಸ್ತೆಫನನು ದೇವರ ಪರವಾಗಿ ಯೆಹೂದ್ಯ ನಾಯಕರ ಎದುರು ವಾದಿಸುತ್ತಿರುವಾಗ ಯೇಸುವು ಪರಲೋಕದ ಗುಡಾರದಲ್ಲಿ ನಿಂತಿದ್ದನು. ತಂದೆಯ ಪಕ್ಕದಲ್ಲಿ ನಿಂತಿದ್ದನು ಇದು ಭೂಲೋಕದಲ್ಲಿ ತೀರ್ಪು ನಡೆಯುತ್ತಿದೆ ಅದಕ್ಕಿಂತ ಮುಖ್ಯವಾಗಿ ಪರಲೋಕದಲ್ಲಿ ನಡೆಯುತ್ತಿರುವ ನ್ಯಾಯಾ ತೀರ್ಪಿನ ಚಿತ್ರಣವನ್ನು ತೋರಿಸುತ್ತದೆ. ದೇವರು ಇಸ್ರಾಯೇಲ್ಯರ ಸುಳ್ಳು ಬೋಧಕರನ್ನು ಮತ್ತು ನಾಯಕರನ್ನು ನ್ಯಾಯವಿಚಾರಣೆಗೆ ಒಳಪಡಿಸುತ್ತಾನೆ.

ಪಶ್ಚಾತ್ತಾಪದ ಕರೆಯನ್ನು ಯಾಕೆ ನೀಡಲಾಗಲಿಲ್ಲ ಎಂಬುದನ್ನು ಇದು ವಿವರಿಸುತ್ತದೆ ಅಪೋಸ್ತಲಕೃತ್ಯಗಳಲ್ಲಿ ಸಾಮಾನ್ಯವಾಗಿ ಕಾಣುವ ದೃಶ್ಯವು ಇಲ್ಲಿ ಕಾಣುವುದಿಲ್ಲ. . *(ಅ.ಪೋ.ಕೃ 2:38, 3:19, 5:31).* ಇಸ್ರಾಯೇಲ್ಯರ ಮೇಲೆ ಇದ್ದ ದೇವರ ಆಳ್ವಿಕೆಯು ಅಂತ್ಯಕ್ಕೆ ಬಂದಿತ್ತು. ಇದರ ಅರ್ಥವೇನೆಂದರೆ ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದ ಹಾಗೆ ಲೋಕದ ರಕ್ಷಣೆ ಕಾರ್ಯದಲ್ಲಿ *(ಆದಿಕಾಂಡ 12:3, 18:18, 22:18*) ಇನ್ನೂ ಮೇಲೆ ಇಸ್ರಾಯೇಲ್ಯರ ಮಧ್ಯಸ್ಥಿಕೆಯ ಅವಶ್ಯಕತೆಯಿರುವುದಿಲ್ಲ. ಆದರೆ ಯೇಸುವಿನ ಹಿಂಬಾಲಕರ ಮೂಲಕ ಯೆಹೂದ್ಯರು ಮತ್ತು ಅನ್ಯರು ಈಗ ಯೆರುಷಲೆಮ ನ್ನು ಬಿಟ್ಟು ಹೊರಟು ಹೋಗಿ ಲೋಕದ ಎಲ್ಲಾ ಕಡೆಗಳಲ್ಲೂ ಸಾಕ್ಷಿಯಾಗಿ ಸುವಾರ್ತೆಯನ್ನು ಸಾರಬೇಕಾಯಿತು. *(ಅ.ಪೋ.ಕೃ 1:8).*

**ಅ.ಪೋ.ಕೃ 7:57-8:1,2 ನ್ನು ಓದಿರಿ. ಲೂಕನು ಸ್ತೆಫನನ ಮರಣವನ್ನು ಹೇಗೆ ವರದಿ ಮಾಡುತ್ತಾನೆ?**

____________________________________________________________________________

____________________________________________________________________________

ದೇವದೂಷಣೆಗೆ ಇರುವ ಶಿಕ್ಷೆ ಕಲ್ಲು ಹೊಡೆದು ಸಾಯಿಸುವುದಾಗಿತ್ತು. *(ಯಾಜಕಕಾಂಡ 24:14)*, ಸ್ತೆಫನನು ಮರಣಕ್ಕೆ ಒಪ್ಪಿಸಲ್ಪಟ್ಟನೋ ಅಥವಾ ಹುಚ್ಚೆದ್ದ ಜನರು ಅವನನ್ನು ಕೊಂದರೋ ಎಂಬುದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಯಾವುದೇ ಪರಿಸ್ಥಿತಿಯಲ್ಲಿ ಯೇಸುವಿನ ನಂಬಿಕೆಗಾಗಿ ಸಾಕ್ಷಿಯಾಗಿ ಹತಸಾಕ್ಷಿಯಾದ ಮೊದಲ ವ್ಯಕ್ತಿಯಾಗಿದ್ದನು. ಅವನನ್ನು ಕೊಂದವರು ಅವರ ಬಟ್ಟೆಗಳನ್ನು ಸೌಲನ ಪಾದಗಳ ಬಳಿಯಲ್ಲಿ ಇಡುವುದನ್ನು ನೋಡಿದಾಗ ಸೌಲನು ಸ್ತೆಫನನ ವಿರೋಧಿಗಳ ನಾಯಕನಾಗಿದ್ದನು. ಅದರೂ ಕೂಡ ಸ್ತೆಫನನು ತನ್ನನ್ನು ಕೊಲ್ಲುವವರಿಗಾಗಿ ಪ್ರಾರ್ಥಿಸುವಾಗ ಸೌಲನಿಗಾಗಿಯೂ ಕೂಡ ಪ್ರಾರ್ಥಿಸಿದನು. ನಂಬಿಕೆಯಲ್ಲಿ ಉನ್ನತ ಸ್ಥಾನದಲ್ಲಿರುವ ಮತ್ತು ಆಚಲವಾದ ವಿಶ್ವಾಸವಿರುವ ವ್ಯಕ್ತಿಯು ಮಾತ್ರ ಈ ಕಾರ್ಯವನ್ನು ಮಾಡಲು ಸಾದ್ಯವಾಗುತ್ತದೆ. ಇದು ಅವನ ಜೀವನದಲ್ಲಿ ಯೇಸುವಿನ ಕುರಿತಾಗಿ ಹೊಂದಿದ್ದ ನಂಬಿಕೆ ಮತ್ತು ವಾಸ್ತವತೆಯನ್ನು ತೋರಿಸುತ್ತದೆ.

ಗುರುವಾರ ಜುಲೈ 26

## ಸುವಾರ್ತೆ ಸೇವೆಯ ವಿಸ್ತರಣೆ

ಸ್ತೆಫೆನನ ಸಾಧಿಸಿದ ಜಯದಿಂದ ವಿಶ್ವಾಸಿಗಳ ಮೇಲೆ ತೀವ್ರವಾದ ಹಿಂಸೆಯನ್ನು ನಡೆಸುವಂತೆ ವಿರೋಧಿಗಳನ್ನು ಪ್ರೇರಣೆಯನ್ನು ನೀಡಿತು. ಸೌಲನು ಈ ಗುಂಪಿನ ನಾಯಕನಾಗಿದ್ದನು. ಇವನು ಸಭೆಗೆ ಹೆಚ್ಚಿನ ಅಪಾಯವನ್ನು ನೀಡಿದನು (*ಅ.ಪೋ.ಕೃ 8:3 26:10).* ಆದರೆ ಹಿಂಸೆಯು ಒಳ್ಳೆಯದಕ್ಕಾಗಿ ಬದಲಾಯಿತು. ಯುದಾಯ ಮತ್ತು ಸಮಾರ್ಯ ದೇಶದೆಲ್ಲೆಡೆ ಚದುರಿಸಲ್ಪಟ್ಟು ವಿಶ್ವಾಸಿಗಳು ಸುವಾರ್ತೆಯನ್ನು ಸಾರುತ್ತಿದ್ದರು. ಈ ಪ್ರಾಂತ್ಯಗಳಲ್ಲಿ ಸುವಾರ್ತೆಯನ್ನು ಸಾರಬೇಕು *(ಅ.ಪೋ.ಕೃ 1:8)* ಎನ್ನುವ ಆಜ್ಞೆಯು ಇದರ ಮೂಲಕ ನೆರವೇರಿತು.

**ಅ.ಪೋ.ಕೃ 8:4-25.ನ್ನು ಓದಿರಿ. ಈ ಸನ್ನಿವೇಶದಲ್ಲಿ ಯಾವ ಪಾಠಗಳನ್ನು ನಾವು ಕಲಿಯಬಹುದು?**

____________________________________________________________

____________________________________________________________

ಸಮರ್ಯಾದವರು ಅರ್ಧ ಇಸ್ರಾಯೇಲ್ಯರಾಗಿದ್ದರು, ಧಾರ್ಮಿಕ ವಿಚಾರಗಳಲ್ಲಿಯೂ ಕೂಡ ಅವರು ಇದೆ ಸ್ಥಾನವನ್ನು ಹೊಂದಿದ್ದರು. ಅವರು ಮೋಶೆಯ ಮೊದಲ ಐದು ಪುಸ್ತಕಗಳನ್ನು ಸ್ವೀಕಾರಮಾಡಿದವರಾಗಿದ್ದರು. ಸುನ್ನತಿಯನ್ನು ಪಾಲಿಸುತ್ತಾ ಮತ್ತು ಮೆಸ್ಸಿಯನು ಬರುತ್ತಾನೆ ಎಂದು ಎದುರುನೋಡುವವರಾಗಿದ್ದರು. ಆದರೆ ಯೆಹೂದ್ಯರ ಪ್ರಕಾರ ಸಮಾರ್ಯದವರ ಧರ್ಮವು ಹಾಳಾದ ಧರ್ಮವಾಗಿತ್ತು, ಇದರ ಪ್ರಕಾರ ಅವರಿಗೆ ಇಸ್ರಾಯೇಲ್ಯರ ಒಡಂಬಡಿಕೆಯಲ್ಲಿ ಯಾವುದೇ ಪಾಲಿಲ್ಲ.

ಸಮಾರ್ಯದವರು ಮಾನಸಾಂತರ ಹೊಂದಿದ್ದು ಯೆರುಷಲೇಮಿನ ಸಭೆಯನ್ನು ಆಚ್ಚರಿಗೆ ಗುರಿಮಾಡಿತು. ಆದ್ದರಿಂದ ಅಪೋಸ್ತಲರು ಪೇತ್ರ ಮತ್ತು ಯೋಹಾನರನ್ನು ಪರಿಸ್ಥಿತಿಯನ್ನು ಲೆಕ್ಕ ಹಾಕಲು ಕಳುಹಿಸಿದರು. ಪೇತ್ರ ಮತ್ತು ಯೋಹಾನರು ಬರುವ ತನಕ ಪರಿಶುದ್ಧಾತ್ಮನ ತಡೆಯುವಿಕೆಯು *(ಅ.ಪೋ,ಕೃ 8:14-17)* ಅಪೋಸ್ತಲರು ಸಮಾರ್ಯದವರನ್ನು ತಮ್ಮ ರಕ್ಷಣೆಯ ವಿಶ್ವಾಸಿಗಳ ನಂಬಿಕೆಯ ಸಮೂಹದಲ್ಲಿ ಸೇರಿಸಿಕೊಳ್ಳಬೇಕು ಎಂಬ ಉದ್ದೇಶವನ್ನು ಹೊಂದಿತ್ತು ಎಂದು ತೋರಿಸುತ್ತದೆ *(ಅ.ಪೋ.ಕೃ 11:1-18).*

ಮೊದಲು ಅಲ್ಲಿ ಸಮಾರ್ಯದವರಿದ್ದರು ನಂತರ ಅನ್ಯದೇಶದವನಾದ ಇತಿಯೋಪಿಯದವನು ತನ್ನ ಮನೆಗೆ ಹಿಂತಿರುಗುವ ದಾರಿಯ ಮಾರ್ಗವಾಗಿ ಆರಾಧನೆ ಮಾಡಲು ಯೆರುಷಲೇಮಿಗೆ ಬಂದನು. ಭವಿಷ್ಯವಾಣಿಯ ಪ್ರಕಾರ ಸುವಾರ್ತೆಯು ಇಸ್ರಾಯೇಲ್ಯರ ಗಡಿಯನ್ನು ದಾಟಿಕೊಂಡು ಬೇರೆ ದೇಶಗಳಿಗೆ ಹೋಗುತ್ತಿತ್ತು. ಇವೆಲ್ಲವೂ ಕೂಡ ಆರಂಭದ ಹಾಗೆ ಕಂಡರು ಕೂಡ ಈ ಮೊದಲ ಯೆಹೂದ್ಯ ವಿಶ್ವಾಸಿಗಳು ಲೋಕದ ಎಲ್ಲಾ ಕಡೆಗೆ ಹೋಗಿ ಯೇಸುವು ತನ್ನ ಮರಣದ ಮೂಲಕ ಹೇಗೆ ಅವರ ಪಾಪಗಳಿಗೆ ಪ್ರಾಯಶ್ಚಿತ್ತವನ್ನು ಸಲ್ಲಿಸಿದ್ದಾನೆ ಮತ್ತು ಎಲ್ಲರಿಗೂ ಮತ್ತು ಎಲ್ಲಾ ಸ್ಥಳಗಳಿಗೂ ರಕ್ಷಣೆಯನ್ನು ನೀಡುತ್ತಾನೆ ಎಂಬುದರ ಕುರಿತಾದ ಸಾಕ್ಷಿಯನ್ನು ಸಾರುತ್ತಿದ್ದರು.

“ಯಾಕಂದರೆ ನೀನು ಹಾನಿಕರ ವಾದ ವಿಷದಲ್ಲಿಯೂ ದುಷ್ಟತ್ವದ ಬಂಧನದಲ್ಲಿಯೂ ಇರುತ್ತೀಯೆಂದು ನನಗೆ ಕಾಣುತ್ತದೆ”(ಅ.ಪೋ.ಕೃ 8:23) ಎಂದು ಪೇತ್ರನು ಸಿಮೋನನಿಗೆ ಹೇಳಿದನು. ಅವನ ಸಮಸ್ಯೆಗೆ ಪರಿಹಾರವೇನು ಮತ್ತು ಅವನ ಹಾಗೆಯೇ ಇರುವವರಿಗೆ ನೀವು ಸೂಚಿಸುವ ಪರಿಹಾರವೇನು?

## ಶುಕ್ರವಾರ

**ಜುಲೈ 27**

**ಹೆಚ್ಚಿನ ಚಿಂತನೆ:** “ಯೆರುಷಲೇಮಿನಲ್ಲಿ ಉಂಟಾದ ಹಿಂಸೆಯು ಸಭೆಯ ಸುವಾರ್ತೆಯ ಸೇವೆಯ ವೇಗವನ್ನು ಹೆಚ್ಚಿಸಿತು. ದೇವರ ವಾಕ್ಯದ ವೃದ್ಧಿಗೆ ಆ ಪ್ರದೇಶದಲ್ಲಿ ಹೆಚ್ಚಿನ ಯಶಸ್ಸನ್ನು ತಂದು ಕೊಟ್ಟಿತು. ಇದರಿಂದ ಯೇಸುವು ತನ್ನ ಶಿಷ್ಯರಿಗೆ ಲೋಕದ ಕಟ್ಟಕಡೆಯವರೆಗೂ ಹೋಗಿ ಸುವಾರ್ತೆಯನ್ನು ಸಾರಿರಿ ಎಂದು ತಮಗೆ ನೀಡಿದ್ದ ಆಜ್ಞೆಯ ವಿಚಾರದಲ್ಲಿ ಹೆಚ್ಚು ಕಾಲವನ್ನು ಅಲ್ಲಿ ಕಳೆಯುವುದನ್ನು ತಪ್ಪಿಸಿತು. ಸೈತಾನನನ್ನು ಎದುರಿಸುವುದು ಅವನನ್ನು ಧೈರ್ಯದಿಂದ ಎದುರಿಸುವುದರಿಂದ ಬರುತ್ತದೆ ಎಂದು ಅವರು ಗ್ರಹಿಸಿದರು. ಯೆರುಷಲೇಮಿನಲ್ಲಿರುವ ಸಭೆಯನ್ನು ಕಾಪಾಡುವುದಕ್ಕಿಂತ ಹೆಚ್ಚಿನ ಜವಾಬ್ದಾರಿ ತಮ್ಮ ಮೇಲೆ ಇದೆ ಆದ್ದರಿಂದ ಇದಕ್ಕಾಗಿ ಹೆಚ್ಚಿನ ಸಮಯವನ್ನು ವ್ಯರ್ಥಮಾಡುವುದು ಸರಿಯಲ್ಲವೆಂದು ಅವರಿಗೆ ಅರ್ಥವಾಯಿತು. ಹೊಸದಾಗಿ ಸಭೆಗೆ ಬಂದಿರುವ ವಿಶ್ವಾಸಿಗಳಿಗೆ ಸುವಾರ್ತೆಯನ್ನು ಕೇಳಿರದ ಅನೇಕರಿಗೆ ಸುವಾರ್ತೆಯನ್ನು ಸಾರುವ ಕಾರ್ಯವನ್ನು ವಹಿಸದೆ ಹೋದರೆ ಇದಾಗಲೇ ಎಲ್ಲವನ್ನೂ ಸಾಧಿಸಿದ್ದೇವೆ ಎಂಬ ಅಪಾಯಕ್ಕೆ ಅವರು ಒಳಗಾಗುವರಾಗಿದ್ದರು. ತನ್ನ ಜನರನ್ನು ತಾನು ಕಳುಹಿಸಬೇಕಾಗಿರುವ ಸ್ಥಳಕ್ಕೆ ಚದುರಿಸಲು ದೇವರು ಹಿಂಸೆಯನ್ನು ತನ್ನ ಸಭೆಯ ಮೇಲೆ ಬರುವುದಕ್ಕಾಗಿ ಅನುಮತಿಸುತ್ತಾನೆ. ಯೆರುಷಲೇಮಿನಿಂದ ಹೊರಟು ವಿಶ್ವಾಸಿಗಳು ಲೋಕದ ಎಲ್ಲಾ ಕಡೆಗೂ ಸುವಾರ್ತೆಯನ್ನು ತೆಗೆದುಕೊಂಡು ಹೋದರು. **ಎಲೆನ್. ಜಿ ವೈಟ್, *ಅಕ್ಟ್ಸ್ ಆಫ್ ದಿ ಅಪೋಸ್ಟ್ಲ ಸ್.* ಪುಟ 105.**

**ಚರ್ಚಿಸಬೇಕಾದ ಪ್ರಶ್ನೆಗಳು**

1. ಎಲೆನ್ ಜಿ ವೈಟ್ ಮ್ಮ ನವರು ಮೇಲೆ ಹೇಳಿರುವ ವ್ಯಾಖ್ಯಾನದ ಕುರಿತಾಗಿ ಆಲೋಚಿಸಿರಿ ತಾವು ಸಾಧಿಸಿದ ಜಯದ ಕುರಿತಾಗಿ ಆದಿ ಸಭೆಯವರು ತೃಪ್ತಿಯನ್ನು ಹೊಂದುವುದರ ಹಿಂದೆ ಇರುವ ಅಪಾಯವೇನು. ಇದರಲ್ಲಿರುವ ವಿಷಯವೆಂದರೆ ಅನೇಕ ಯೆಹೂದ್ಯರು ಹಿಂದೆಂದೂ ಅರಿಯದ ರೀತಿಯಲ್ಲಿ ಕ್ರಿಸ್ತನನ್ನು ಅಂಗಿಕರಿಸಿದರು ಇದರ ಮೂಲಕ ಈ ದಿನದ ಸಭೆಯಾಗಿ ನಾವು ಕಲಿಯುವ ಪಾಠವೇನು? ನಾವು ಸುವಾರ್ತೆಯನ್ನು ಸಾರಿರುವವರನ್ನು ಕಾಪಾದುವುದರಲ್ಲಿಯೇ ಹೆಚ್ಚಿನ ಸಮಯವನ್ನು ವ್ಯರ್ಥ ಮಾಡುವುದರ ಮೂಲಕ ಇರುವ ಅಪಾಯವನ್ನು ನಾವು ಹೇಗೆ ಗ್ರಹಿಸಬಹುದು ಇದಕ್ಕೆ ವಿರುದ್ದವಾಗಿ ನಾವು ಲೋಕದ ಇತರೆ ಕಡೆಗೆ ಹೇಗೆ ಸುವಾರ್ತೆಯನ್ನು ತೆಗೆದುಕೊಂಡು ಹೋಗಬಹುದು?

2. ಅಪೋಸ್ತಲರ ಕಾಲಕ್ಕೆ ಯೆಹೂದ್ಯರ ಮತ್ತು ಸಮಾರ್ಯರ ನಡುವೆ ಅನೇಕ ಶತಮಾನಗಳ ವೈರತ್ವವು ಬೆಳೆದುಕೊಂಡಿತ್ತು. ಯೆಹೂದ್ಯನಾದ ಫಿಲಿಪ್ಪನು ಸಮಾರ್ಯದ ದೇಶದಲ್ಲಿ ಸುವಾರ್ತೆಯನ್ನು ಸಾರುವುದರಿಂದ ನಾವು ಯಾವ ರೀತಿಯ ಪಾಠವನ್ನು ಕಲಿಯಬಹುದು?ಸೇವೆಂತ್ ಡೇ ಅಡ್ವೆಂಟಿಸ್ಟ್ ರಾಗಿ ನಾವು ಕೂಡ ಸಾಂಸ್ಕೃತಿಕ ಮತ್ತು ಭೌಗೋಳಿಕ ಹಿನ್ನಲೆಯ ತಾರತಮ್ಯಕ್ಕೆ ಹೊರತಾಗಿಲ್ಲ. ದೇವರ ಮುಂದೆ ನಾವೆಲ್ಲರೂ ಕೂಡ ಒಂದೇ ಎಂಬ ಸತ್ಯವನ್ನು ಕ್ರಿಸ್ತನ ಶಿಲುಬೆಯು ನಮಗೆ ಹೇಗೆ ತಿಳಿಸುತ್ತದೆ? ಪ್ರತಿಯೊಬ್ಬ ಮಾನವನು ಕೂಡ ದೇವರ ದೃಷ್ಟಿಯಲ್ಲಿ ಸಮಾನನಾಗಿದ್ದಾನೆ ಎಂಬ ಸತ್ಯವನ್ನು ಸಾರ್ವತ್ರಿಕವಾದ ಯೇಸುವಿನ ಮರಣವು ಹೇಗೆ ನಮಗೆ ತಿಲಿಸಲ್ಪಟ್ಟಿದೆ?
3. ಫಿಲಿಪ್ಪನು ಇತಿಯೋಪಿಯನನ್ನು ಹೇಗೆ ಸಂಧಿಸಿದನು (ಅ.ಪೋ.ಕೃ 8:27-30)? ಇತರರಿಗೆ ಸುವಾರ್ತೆಯನ್ನು ಸಾರುವ ಅವಕಾಶಗಳನ್ನು ನಾವು ಕೂಡ ಹೇಗೆ ಉಪಯೋಗಿಸಿಕೊಳ್ಳಬಹುದು ಎಂಬುದನ್ನು ಇದರಿಂದ ನಾವು ಹೇಗೆ ಕಲಿಯಬಹುದು?
4. ಅಪೋಸ್ತಲರ ಕೃತ್ಯಗಳು 6-8 ರಲ್ಲಿ ನಾವು ಕಲಿತ ಪಾಠಗಳು ಸಭೆಯ ಸುವಾರ್ತೆಯ ಕೆಲಸವನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ನಮಗೆ ಸಹಾಯವಾಗುತ್ತವೆ?